## ಉಪತಹಶೀಲ್ದಾರರ ನ್ಯಾಯಾಲಯ, ನಾಡಕಛೇರಿ, ಕಮಲಾಪುರ,
## ಹೊಸಪೇಟೆ ತಾಲ್ಲೂಕು-583221.

ಎ.ವಿಲೇ.ನಂ.ಕಂ/ನಾ.ಕ.ಕ/ಪಹಣಿ/ತಕರಾರು/81/2015-16 ದಿನಾಂಕ: 16.06.2016.

ಉಪಸ್ಥಿತರು: ಉಪತಹಶೀಲ್ದಾರರು,
ನಾಡಕಛೇರಿ, ಕಮಲಾಪುರ.

*****

**ವಾದಿಗಳು ಶ್ರೀ/ಶ್ರೀಮತಿ:**

1. ಶ್ರೀ ಜೆ.ಕೆ.ಕೊಟ್ರಪ್ಪ ತಂದೆ ಲೇಟ್ ಜೆ.ಕೊಟ್ರಪ್ಪ, ಮನೆ ನಂ:3562, ಎಂ.ಸಿ.ಸಿ.ಬ್ಲಾಕ್, ದಾವಣಗೆರೆ, ಜಿ:ತಾ: ದಾವಣಗೆರೆ.
2. ತಹಶೀಲ್ದಾರರು, ಹೊಸಪೇಟೆ.

**ಪ್ರತಿವಾದಿಗಳು ಶ್ರೀ/ಶ್ರೀಮತಿ:**

ಶ್ರೀ ಬಿ.ಜಿ.ಶ್ಯಾಂರಾವ್ ತಂದೆ ಬಿ. ಗುಂಡುರಾವ್, ಮನೆ ನಂ: 3763, ಪರಿಮಳ, ಎಂ.ಸಿ.ಸಿ.ಬ್ಲಾಕ್, ದಾವಣಗೆರೆ, ತಾ:ಜಿ: ದಾವಣಗೆರೆ.

**ವ್ಯಾಜ್ಯದ ಜಮೀನು:**

| ತಾಲ್ಲೂಕು | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|
| ಹೊಸಪೇಟೆ | ಕಮಲಾಪುರ | 901 | 00.42 |

**ಪೀಠಿಕೆ:**

ಹೊಸಪೇಟೆ ತಾಲ್ಲೂಕು, ಕಮಲಾಪುರ ಗ್ರಾಮದ ಸ.ನಂ.901 ಒಟ್ಟು ವಿಸ್ತೀರ್ಣ 10 ಎಕರೆ 54 ಸೆಂಟ್ಸ್ ಪೈಕಿ 07 ಎಕರೆ 50 ಸೆಂಟ್ಸ್ ಜಮೀನು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಂದ ಭೂ ಪರಿವರ್ತನೆಯಾಗಿದ್ದು, ಸದರಿ ಪರಿವರ್ತಿತ ಜಮೀನಿಗೆ ತೆರಳಲು ಉಳಿದ ಕೃಷಿ ಭೂಮಿ ವಿಸ್ತೀರ್ಣ 03 ಎಕರೆ 04 ಸೆಂಟ್ಸ್ ಪೈಕಿ ವಿಸ್ತೀರ್ಣ: 00 ಎಕರೆ 42 ಸೆಂಟ್ಸ್ ಜಮೀನನ್ನು ಸಾರ್ವಜನಿಕ ರಸ್ತೆಗಾಗಿ ಬಿಟ್ಟುಕೊಡುವ ಉದ್ದೇಶದಿಂದ ಭೂ ಮಾಲೀಕರಾದ ವಾದಿ-1 ರವರಾದ ಶ್ರೀ ಜೆ.ಕೆ.ಕೊಟ್ರಪ್ಪ ತಂದೆ ಲೇಟ್ ಜೆ.ಕೊಟ್ರಪ್ಪ, ಮನೆ ನಂ:3562, ಎಂ.ಸಿ.ಸಿ.ಬ್ಲಾಕ್, ದಾವಣಗೆರೆ, ಜಿ:ತಾ: ದಾವಣಗೆರೆ ಇವರು ನೋಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ದಿನಾಂಕ: 01.12.2015 ರ ನೋಂದಾಯಿತ ಹಕ್ಕುಬಿಡುಗಡೆ ಪತ್ರ ಸಂಖ್ಯೆ: 4763/2015-16 ರನ್ವಯ ಮಾನ್ಯ ಘನತೆವೆತ್ತ ಕರ್ನಾಟಕ ರಾಜ್ಯಪಾಲರ ಪರವಾಗಿ ತಹಶೀಲ್ದಾರರು, ಹೊಸಪೇಟೆ ಇವರ ಹೆಸರಿಗೆ ಬಿಟ್ಟುಕೊಟ್ಟಿರುತ್ತಾರೆ.

ಅದರಂತೆ, ಹಕ್ಕು ಬದಲಾವಣೆ ಪ್ರಕ್ರಿಯೆ ಪ್ರಾರಂಭಿಸುತ್ತಾ, ಈ ಬಗ್ಗೆ ಗ್ರಾಮಲೆಕ್ಕಿಗರು, ಕಮಲಾಪುರ ಇವರು ನಮೂನೆ-21 ರ ನೋಟೀಸನ್ನು ಗ್ರಾಮದಲ್ಲಿ ಪ್ರಚುರಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ, ದಾವಣಗೆರೆ ಜಿಲ್ಲೆ ಹಾಗೂ ತಾಲ್ಲೂಕು, ದಾವಣಗೆರೆ ಗ್ರಾಮದ ಶ್ರೀ ಬಿ.ಜಿ.ಶ್ಯಾಂರಾವ್ ತಂದೆ ಬಿ.ಗುಂಡುರಾವ್, ಇವರು ತನ್ನ ಜಮೀನಿಗೆ ರಸ್ತೆ ಹೊಂದಾಣಿಕೆ ಇಲ್ಲದ ಕಾರಣ ವ್ಯಾಜ್ಯದ ಜಮೀನನ್ನು ಸಾರ್ವಜನಿಕರ ರಸ್ತೆಗಾಗಿ ಬಿಟ್ಟುಕೊಟ್ಟಿರುವುದಕ್ಕೆ ಹಾಗೂ ಸದರಿ ವಿಸ್ತೀರ್ಣದ ವಹಿವಾಟಿಗೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ, ಸದರಿ ಪ್ರಕರಣವನ್ನು ವಿವಾದಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು, ವಿಚಾರಣೆ ಮಾಡುವುದಕ್ಕಾಗಿ ಉಭಯ ಪಕ್ಷದವರಿಗೂ ನೋಟೀಸ್ ನೀಡಿ ದಿನಾಂಕ: 17.03.2016 ರಂದು ವಿಚಾರಣೆ ಪ್ರಾರಂಭಿಸಲಾಯಿತು.

ವಿಚಾರಣೆ ಸಮಯದಲ್ಲಿ, ಪ್ರತಿವಾದಿಯು ಹಾಜರಾಗಿ ದಿನಾಂಕ: 13.05.2016 ರಂದು ಪ್ರಮಾಣೀಕರಿಸಿದ ಅಫಿಡವಿಟ್‌ನ್ನು ಸಲ್ಲಿಸುತ್ತಾ, ವ್ಯಾಜ್ಯದ ಜಮೀನಿನ ಉಳಿದ ವಿಸ್ತೀರ್ಣ 03 ಎಕರೆ 04 ಸೆಂಟ್ಸ್ ಪೈಕಿ 00 ಎಕರೆ 42 ಸೆಂಟ್ಸ್‌ನ್ನು ಸಾರ್ವಜನಿಕರ ರಸ್ತೆಗಾಗಿ ಬಿಟ್ಟುಕೊಟ್ಟಿರುವ ಬಗ್ಗೆ ಪೂರ್ಣ ಮಾಹಿತಿ ಪಡೆದಿದ್ದು, ಸದರಿ ಸಾರ್ವಜನಿಕರ ರಸ್ತೆಗಾಗಿ ಬಿಟ್ಟುಕೊಟ್ಟಿರುವ ಜಮೀನು ಸರಿಯಾಗಿರುವುದೆಂದು ತಿಳಿದು ಬಂದ ಕಾರಣ ತನ್ನ ಯಾವುದೇ ತಕರಾರು ಇಲ್ಲವೆಂದು ತಿಳಿಸುತ್ತಾ, ವ್ಯಾಜ್ಯದ ಜಮೀನನ್ನು ವಾದಿ-2 ರವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಒಪ್ಪಿಗೆ ಸೂಚಿಸುತ್ತಾ, ತಮ್ಮದೇನು ಆಕ್ಷೇಪಣೆ / ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.

ಕಾರಣ, ಹೊಸಪೇಟೆ ತಾಲ್ಲೂಕು, ಕಮಲಾಪುರ ಗ್ರಾಮದ ಸ.ನಂ: 901 ವಿಸ್ತೀರ್ಣ 00 ಎಕರೆ 42 ಸೆಂಟ್ಸ್ ಜಮೀನನ್ನು ಸಾರ್ವಜನಿಕ ರಸ್ತೆಗಾಗಿ ನೋಂದಾಯಿತ ಹಕ್ಕು ಬಿಡುಗಡೆ ಪತ್ರ ಸಂಖ್ಯೆ: 4763/2015-16 ದಿನಾಂಕ: 01.12.2015 ರನ್ವಯ ಹಕ್ಕು ಬಿಟ್ಟು ಕೊಟ್ಟಿದ್ದು ಅದರಂತೆ, ಮಾನ್ಯ ಘನತೆವೆತ್ತ ಕರ್ನಾಟಕ ರಾಜ್ಯಪಾಲರ ಪರವಾಗಿ ತಹಶೀಲ್ದಾರರು, ಹೊಸಪೇಟೆ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಈ ಕೆಳಗಿನಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ಸಾಕ್ಷ್ಯಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇಲೆ ಸದರಿ ಪ್ರಕರಣವನ್ನು ಪರಿಗಣಿಸುತ್ತಾ, ಪ್ರತಿವಾದಿಯು ದಿನಾಂಕ: 13.05.2016 ರ ಅಫಿಡವಿಟ್‌ನಲ್ಲಿ ಹಾಗೂ ದಿನಾಂಕ: 16.06.2016 ರ ವಿಚಾರಣೆ ಸಮಯದಲ್ಲಿ ನೀಡಿದ ಒಪ್ಪಿಗೆಯಂತೆ ಹಾಗೂ ಯಾವುದೇ ಆಕ್ಷೇಪಣೆ ಇಲ್ಲವೆಂದು ತಿಳಿಸಿರುವುದರಿಂದ, ಹೊಸಪೇಟೆ ತಾಲೂಕು, ಕಮಲಾಪುರ ಗ್ರಾಮದ ಸ.ನಂ.901 ವಿಸ್ತೀರ್ಣ: 00 ಎಕರೆ 42 ಸೆಂಟ್ಸ್ ಜಮೀನನ್ನು ವಾದಿ-1 ರವರು ಸಾರ್ವಜನಿಕ ರಸ್ತೆಗಾಗಿ ನೋಂದಾಯಿತ ಹಕ್ಕು ಬಿಡುಗಡೆ ಪತ್ರ ಸಂಖ್ಯೆ: 4763/2015-16 ದಿನಾಂಕ: 01.12.2015 ರನ್ವಯ ಹಕ್ಕು ಬಿಟ್ಟು ಕೊಟ್ಟಿದ್ದು ಅದರಂತೆ, ಮಾನ್ಯ ಘನತೆವೆತ್ತ ಕರ್ನಾಟಕ ರಾಜ್ಯಪಾಲರ ಪರವಾಗಿ ತಹಶೀಲ್ದಾರರು, ಹೊಸಪೇಟೆ ಇವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈದಿನ ದಿನಾಂಕ: 16.6.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

V.S.

ಉಪತಹಶೀಲ್ದಾರರು,
ನಾಡಕಛೇರಿ, ಕಮಲಾಪುರ.
ಹೊಸಪೇಟೆ ತಾಲೂಕು.

ಪ್ರತಿಯನ್ನು:-

1]ವಾದಿಯಾದ ಶ್ರೀ ಜೆ.ಕೆ.ಕೊಟ್ರಪ್ಪ ತಂದೆ ಲೇಟ್ ಜೆ.ಕೊಟ್ರಪ್ಪ, ಮನೆ ನಂ:3562, ಎಂ.ಸಿ.ಸಿ.ಬ್ಲಾಕ್, ದಾವಣಗೆರೆ, ಜಿ:ತಾ: ದಾವಣಗೆರೆ ಇವರಿಗೆ ಕಳುಹಿಸಲಾಗಿದೆ.

2]ಪ್ರತಿವಾದಿಯಾದ ಶ್ರೀ ಬಿ.ಜಿ.ಶ್ಯಾಂರಾವ್ ತಂದೆ ಬಿ.ಗುಂಡುರಾವ್, ಮನೆ ನಂ: 3763, ಪರಿಮಳ, ಎಂ.ಸಿ.ಸಿ.ಬ್ಲಾಕ್, ದಾವಣಗೆರೆ, ತಾ:ಜಿ: ದಾವಣಗೆರೆ ಇವರಿಗೆ ಕಳುಹಿಸಲಾಗಿದೆ.

3]ಮಾನ್ಯ ತಹಶೀಲ್ದಾರರು, ಹೊಸಪೇಟೆ ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.

4]ಭೂಮಿಕೇಂದ್ರ, ತಾಲೂಕು ಕಛೇರಿ, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

5]ಕಂದಾಯ ನಿರೀಕ್ಷಕರು, ಕಮಲಾಪುರ ಹೋಬಳಿ, ಕಮಲಾಪುರ ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.